ಅಧ್ಯಕ್ಷರು:– ಅದನ್ನು ಅವರು ಕೇಳಲಿಲ್ಲ.

ಶ್ರೀ ಕೆ.ಜೆ. ಜಾರ್ಜ್:– 144 ಸೆಕ್ಷನ್ ಹಾಕಿದಾಗ ಯಾರು ಮೆರವಣಿಗೆಯಲ್ಲಿ ಇದ್ದವರು ಅವರು ನಮ್ಮ ಕೆ.ಎಸ್.ಆರ್.ಪಿ. ವ್ಯಾನ್‌ಗೆ, ಕೆ.ಎಸ್.ಆರ್.ಪಿ. ಬಸ್‌ಗೆ ಕಲ್ಲು ಹೊಡೆದಿದ್ದಾರೆ.

ಅಧ್ಯಕ್ಷರು:– ಅದನ್ನು ಕೇಳಲಿಲ್ಲ. ಅವರು ಕೇಳಿದ್ದು ಇಷ್ಟೇ. ಕಲ್ಲು ಹೊಡೆದಂಥ ಕೆಲವರಲ್ಲಿ ಕೇಸ್ ಹಾಕಿಲ್ಲವೆಂದು ಕೇಳಿದ್ದಾರೆ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಎಲ್ಲರ ಮೇಲೆಯೂ ಕೇಸ್ ಹಾಕಿದ್ದೇವೆ.

(ಗೊಂದಲ)

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಕೇಸ್ ಹಾಕಿಲ್ಲ.

(ಗೊಂದಲ)

ಅಧ್ಯಕ್ಷರು:– ಸಾಕು ಬಿಡಿ, ಬೇರೆ ರೂಪದಲ್ಲಿ ಚರ್ಚೆಗೆ ತನ್ನಿ.

(ಗೊಂದಲ)

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ:– ಮಾನ್ಯ ಅಧ್ಯಕ್ಷರೆ, ಇದು ನನ್ನ ಕ್ಷೇತ್ರದಲ್ಲಿ ಆದಂಥ ಘಟನೆಯಾಗಿದೆ.

(ಗೊಂದಲ)

ಅಧ್ಯಕ್ಷರು:– Over, over. ಶ್ರೀ ರಾಮಕೃಷ್ಣ ಶ್ರೀ ದೊಡ್ಡಮನಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಡಗೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಓಲೈಕೆಯ ರಾಜಕಾರಣ ಮಾಡಬಾರದೆಂದರೆ ನ್ಯಾಯಬದ್ಧವಾಗಿ ಆಡಳಿತ ಮಾಡಬೇಕು. ಆಡಳಿತದಲ್ಲಿ ಓಲೈಕೆ ರಾಜಕಾರಣ ಮಾಡಬಾರದು.

(ಗೊಂದಲ)

(ಈ ಹಂತದಲ್ಲಿ ಶ್ರೀ ಸಿ.ಟಿ. ರವಿಯವರು ಸದನದ ಬಾವಿಯೊಳಗೆ ಬಂದು ಅಧ್ಯಕ್ಷರ ಮುಂದೆ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು:– ದಯವಿಟ್ಟು, ಶ್ರೀ ಸಿ.ಟಿ. ರವಿಯವರೆ ಇದನ್ನು ಬೇರೆ ರೂಪದಲ್ಲಿ ಚರ್ಚೆಗೆ ತನ್ನಿ. ಇದಕ್ಕೆಲ್ಲಾ ಇಲ್ಲಿ ಅವಕಾಶವಿಲ್ಲ.